# ಕುಂಡೆ ಹಬ್ಬ

## ಸುಪ್ತ ಮನಸ್ಸಿಗೊಂದು ಕನ್ನಡಿ

**ಕೊಡಗಿನ ‘ಕುಂಡೆ ಹಬ್ಬ’ ಮನುಷ್ಯನ ಸುಪ್ತ ಮನಸ್ಸು ಅಭಿವ್ಯಕ್ತಗೊಳ್ಳುವ ಒಂದು ವಿಶಿಷ್ಟ ಆಚರಣೆ. ಮೇ 23ರಿಂದ ಎರಡು ದಿನಗಳ ಕಾಲ ಕೊಡಗಿನಲ್ಲಿ ‘ಕುಂಡೆ ಹಬ್ಬ’ದ ಸಂಭ್ರಮ**

■ ಅಕ್ಷಯ ಕಾಂತಬೈಲು




ಹಬ್ಬಗಳಿಗೆ ತಳುಕು ಹಾಕಿಕೊಂಡಿರುವ ರೂಢಿಗತವಾದ ಧಾರ್ಮಿಕ ಹಾಗೂ ನೈತಿಕ ಆವರಣ ದಾಟುವ ಮೂಲಕ ರಂಜನೆ ಒದಗಿಸುವ ವಿಶಿಷ್ಟ ಆಚರಣೆ, ಕೊಡಗು ಜಿಲ್ಲೆಯ ‘ಕುಂಡೆ ಹಬ್ಬ’.

ಫಸಲು ಕುಯ್ದ ತರುವಾಯ ಕಾಫಿ ಗಿಡದ ಪೋಷಣೆ, ನೆರಳು ಚೆಲ್ಲುವ ಮರಗಳ ಮಟ್ಟಸ ಮಾಡುವುದು, ಕಳೆ ಕೀಳುವಿಕೆ, ತೋಟದ ಇನ್ನಿತರ ಕೆಲಸಗಳಲ್ಲಿ ಭಾಗಿಯಾಗುವ ಕೊಡಗಿನ ಬುಡಕಟ್ಟು ಸಮುದಾಯ ಮೈಮನಗಳನ್ನು ಹಗುರ ಮಾಡಿಕೊಂಡು ಕುಂಡೆ ಹಬ್ಬದಲ್ಲಿ ಸಂಭ್ರಮಿಸುತ್ತದೆ.

ಮೇ ತಿಂಗಳ ತೀವ್ರ ಬಿಸಿಲಿಗೆ ಮೈಯೊಡ್ಡಿ, ಕಾಫಿ, ಕಾಳುಮೆಣಸಿನ ಎಲೆಗೊಂಚಲು ಮುಂಗಾರಿಗಾಗಿ ಬಾಯಿಬಿಟ್ಟು ಕಾದಿರುವ ಸಮಯ ಕುಂಡೆ ಹಬ್ಬದ ಸಂದರ್ಭವೂ ಹೌದು. ‘ಬೈಗುಳದ ಹಬ್ಬ’ ಎನ್ನುವುದು ಈ ಆಚರಣೆಯ ಇನ್ನೊಂದು ಹೆಸರು.

ನಗರದ ವಿದ್ಯಮಾನಗಳಿಂದ ದೂರವುಳಿದವರನ್ನು ಅನಾಗರಿಕರು, ಹಿಂದುಳಿದವರು ಎಂದು ಕೆಲವರು ಭಾವಿಸುವುದಿದೆ. ಇಂಥ ಭಾವನೆಗಳನ್ನು ವ್ಯಂಗ್ಯವಾಡುತ್ತ, ಆಧುನಿಕತೆಯ ಶೋಕಿ, ಥಳುಕು ಬಳಕು, ಸೋಗಲಾಡಿತನವನ್ನು ವಿಡಂಬಿಸುವ ಪ್ರಹಸನ ಈ ಹಬ್ಬದಲ್ಲಿದೆ.

ಕೆಲವು ವರ್ಷಗಳ ಹಿಂದೆ ಕೊಡಗಿನ ಕಡೆಯ ರ್‍ಯಾಪ್ ತರಹದ ಗೀತೆಯೊಂದು ಯುವಸಮೂಹದ ಗಮನಸೆಳೆದಿತ್ತು. ‘ಕುಂಡೆಗೆ ವಿಕ್ಸು ಹಚ್ಚಿ, ಮಾಲೀಷ್ ಮಾಡಿ... ಕುಂಡೆ ಲೆಮನ್ ಜೂಸು’– ಹೀಗೆ ಸಾಗುತ್ತಿದ್ದ ಆ ಹಾಡಿನ ಸಾಹಿತ್ಯ ಕೆಲವರಿಗೆ ಮೋಜಿನ ರೀತಿ ಕಾಣಿಸಿತ್ತು; ಮತ್ತೆ ಕೆಲವರಿಗೆ ‘ಎಂಥ ತಲೆಕೆಟ್ಟ ಲಿರಿಕ್ಸು’ ಎಂದು ಮುಖ ಸಿಂಡರಿಸಿಕೊಳ್ಳಲು ಕಾರಣವಾಗಿತ್ತು. ಆ ಗೀತೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ, ಕುಂಡೆ ಹಬ್ಬದಲ್ಲಿ ಭಾಗವಹಿಸುವವರ ಮಾತುಗಳೇ ಹಾಡಿನ ರೂಪು ಪಡೆದುಕೊಂಡಿದ್ದುದು ತಿಳಿಯುತ್ತದೆ.

### ಕುಂಡೆ ಹಬ್ಬಕ್ಕೊಂದು ಪುರಾಣ

ಒಮ್ಮೆ ವಿಹಾರಕ್ಕಾಗಿ ದೇವಿ ಭದ್ರಕಾಳಿಯು ಗಿರಿಜನರ ಜೊತೆಗೆ ಬೇಟೆಗೆ ಹೊರಡುತ್ತಾಳೆ. ಇವರೆಲ್ಲಾ ಬೇಟೆ ಮಾಡಿಕೊಂಡು ಕೊಡಗಿನ ದಕ್ಷಿಣ ಭಾಗದ ಗೋಣಿಕೊಪ್ಪದ ‘ದೇವರಪುರ’ದ ಅಡವಿಗೆ ಬರುತ್ತಾರೆ. ಅದು ಬೇಟೆಗಾರ ಅಯ್ಯಪ್ಪ ಸ್ವಾಮಿಯ ನೆಲೆಬೀಡು. ಅಲ್ಲಿ ಅಯ್ಯಪ್ಪನನ್ನು ನೋಡಿದ ಭದ್ರಕಾಳಿಯು ಮೋಹವಶಳಾಗುತ್ತಾಳೆ. ಆದಿವಾಸಿಗಳ ಇರುವನ್ನು ಮರೆತವರಂತೆ, ಅಯ್ಯಪ್ಪ ಹಾಗೂ ಭದ್ರಕಾಳಿ ಅಲ್ಲಿಂದ ಓಡಿಹೋಗುತ್ತಾರೆ. ತಮಗೆ ಬೆನ್ನುಹಾಕಿ ಓಡಿಹೋದ ಈರ್ವರನ್ನೂ ಆದಿವಾಸಿಗಳು ಸಿಟ್ಟಿಂದ ‘ಏ ಕುಂಡೆ’ ಎಂದು ಛೇಡಿಸುತ್ತಾರೆ. ಆ ಛೇಡಿಸುವಿಕೆಯಿಂದ ಹಬ್ಬ ಆರಂಭವಾಯಿತು ಎನ್ನುತ್ತದೊಂದು ಕಥೆ.

ಆ ದೈವಗಳನ್ನು ತಮ್ಮೆಡೆಗೆ ಆಕರ್ಷಿಸಲು ಬುಡಕಟ್ಟು ಸಮುದಾಯಗಳು ಹಬ್ಬದಂದು ವೇಷ ಕಟ್ಟಿ ಕುಣಿಯುತ್ತಾರೆ ಎನ್ನಲಾಗುತ್ತದೆ. ಕುಂಡೆ ಹಬ್ಬದ ಆಚರಣೆಗಳ ಬಗ್ಗೆ ವಿಭಿನ್ನ ಕಥನಗಳೂ ಇವೆ.

ಕೊಡಗಿನ ಬೆಟ್ಟಕುರುಬರ ಕಾರಣಿಕ ದೇವತೆ, ಗೋಣಿಕೊಪ್ಪದ ತಿತಿಮತಿ ಬಳಿಯ ದೇವಪುರದ ಭದ್ರಕಾಳಿ. ಕುಂಡೆ ಹಬ್ಬ ಶುರುವಾಗುವುದೇ ಈ ಭದ್ರಕಾಳಿ ಗುಡಿಯಿಂದ. ಆದಿಪಂಗಡಗಳಲ್ಲಿ ಬೆಟ್ಟಕುರುಬರು ಮಾತ್ರ ದೇವರಗುಡಿಯೊಳಗೆ ಪೂಜೆ–ವ್ರತಗಳ ಕೈಗೊಳ್ಳುವುದು ಆದಿಕಾಲದಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ಹಬ್ಬದ ಮೊದಲ ರಾತ್ರಿ ದೇವಿ ಮಾತೆಯೆದುರು ಬಿದಿರಿನಿಂದ ಹೆಣೆದ ಕುದುರೆಯ ಪ್ರತಿಕೃತಿಯನ್ನು ಬೆಟ್ಟಕುರುಬರು ಆಡಿಸುವರು. ಬಳಿಕ ಬೆಳಕು ಮೂಡುವ ತನಕ ದೇವಸ್ಥಾನದ ಅಂಕದಲ್ಲಿ ಹಿಗ್ಗಾಮುಗ್ಗ ಕುಣಿತ ಹಾಕುವರು.

ಕುಂಡೆ ಹಬ್ಬ ಆರಂಭಗೊಳ್ಳುವ ದಿನಾಂಕ ನಿಗದಿಗೊಳಿಸುವುದು ದೇವರಪುರದ ಕುರುಬರ ಹಾಡಿಗೆ ಸಂಬಂಧಿತ ಸಣುವಂಡ ಮನೆತನ. ಈ ವರ್ಷ ಇದೇ ಮೇ 23ರಂದು ಹಬ್ಬ ನಿಗದಿಯಾಗಿದ್ದು, ಆವತ್ತು ರಾತ್ರಿ ಶುರುವಾಗುವ ಆಚರಣೆ ಎರಡು ದಿನಗಳ ಕಾಲ ನಡೆಯಲಿದೆ.

ಹಬ್ಬದ ವಿವರಗಳಿಗಾಗಿ ನಾನು ಬೆಟ್ಟಕುರುಬರ ಹಾಡಿ ಸಂದರ್ಶಿಸಿದೆ. ಆಗ ನನಗೆ ಜೊತೆಯಾದವರು ‘ಕಾಳಿ’ ಹೆಸರಿನ ಹಿರೀಕರು. ದೊಡ್ಡ ದುಂಡನೆ ಕಣ್ಣುಗಳಿರುವ, ನಾಲಗೆ ಹೊರಚಾಚಿದ ದೇವರ ಪಟವೊಂದನ್ನು ತೋರಿ, ಆ ದೇವರು ದೇವರಪುರದ ಭದ್ರಕಾಳಿಯೆಂದೂ, ಆ ದೇವಿಯ ನಾಲಗೆಗೆ ಮೊಳೆ ಜಡಿಯಲಾಗಿದೆಯೆಂದೂ, ಫೋಟೊದಲ್ಲಿ ದೇವಿಯ ನಾಲಿಗೆಯಿರೋ ಭಾಗಕ್ಕೆ ಕೈಬೆರಳು ಮುಟ್ಟಿತೋರಿದರು. ತಮ್ಮ ಮಾತಿಗೆ ಪೂರಕವಾಗಿ ಕಥೆಯೊಂದನ್ನು ಹೇಳಿದರು:


ವೇಷಗಾರರ ವಿಚಿತ್ರ ಅಲಂಕಾರಗಳಿಗೆ ಒಂದು ಮಾದರಿ

“ಒಂದಾನೊಂದು ಕಾಲದಲ್ಲಿ ಕುಂಡೆ ಹಬ್ಬದ ಮೊದ್ಲ ದಿನ ರಾತ್ರಿ ಸುಮಾರು ಹನ್ನೆರಡು ಹದಿನೈದು ವಯಸ್ಸಿನ ಒಬ್ಬ ಹುಡುಗನನ್ನ ದೇವರಪುರದ ಭದ್ರಕಾಳಿಯಮ್ಮುಂಗೆ ಬಿಟ್ಟು ಕೊಡೋ ರೂಢಿಯಿತ್ತು. ಆ ಹುಡುಗನ ದೇವೀ ಪೂಜೇಲಿ ಕೂರ್ಸಿ ಸುದ್ಧ ಮಾಡಿದ ನಂತ್ರ, ಅಂವ ದೇವಸ್ಥಾನದಲ್ಲಿ ಬೆಳಗಿನ ತಂಕ ಕುಣೀಬೇಕಿತ್ತು. ನಂತ್ರ ದೇವಿಗೆ ಬಿಟ್ಟ ಆ ಹುಡುಗನ್ನ ಹೆತ್ತೋರು ಮನೆಗೆ ಕರ್ಕಂಡು ಹೋಗ್ತಿದ್ರು. ಆದರೆ ಪಾಪ! ಆ ಹುಡುಗ ಬರುವ ವರ್ಸದ ಹಬ್ಬದ ದಿನಕೂ ಮುಂಚೆ ಸತ್ತು ಹೋಗ್ತಿತ್ತು. ಹೀಗೆ ಆ ಭದ್ರಕಾಳಿಯಮ್ಮುಂಗೆ ವರ್ಸ ವರ್ಸ ಕುರುಬರ ಹಾಡಿಯ ಹುಡುಗ್ರನ್ನ ತಿನ್ನೋದೇ ಆಗೋಯ್ತು. ಅದುಕ್ಕೆ ನಮ್ಮೋರೆಲ್ಲ ಕುಂತು ಒಂದು ಉಪಾಯ ಹೂಡುದ್ರು. ಹಿರೀಕರೆಲ್ಲ ಸೇರ್ಕಂಡು